## 11. ಭೂ ಸೇನೆಗೆ ಮಹಿಳಾ ಬಲ

ಭಾರತೀಯ ಸೇನೆಯಲ್ಲಿ ಮಹಿಳೆಯರ ಪೂರ್ಣಾವಧಿ ನೇಮಕಕ್ಕೆ (ಪರ್ಮನೆಂಟ್ ಕಮಿಷನ್) ರಕ್ಷಣಾ ಸಚಿವಾಲಯವು ಅಧಿಕೃತ ಅನುಮೋದನೆ ನೀಡಿದೆ. ಅಲ್ಪಾವಧಿ ಸೇವಾ ನೇಮಕದ ಮೂಲಕ ಸೇನೆಗೆ ಸೇರಿದ ಮಹಿಳೆಯರ ದೀರ್ಘ ಕಾನೂನು ಹೋರಾಟಕ್ಕೆ ಈ ಮೂಲಕ ಗೆಲುವು ದೊರೆತಿದೆ.

ಮುನ್ನೆಲೆ ಹೋರಾಟಕ್ಕೆ ಬೆಂಬಲ ಒದಗಿಸುವ ಎಂಟು ಸೇವೆಗಳಲ್ಲಿ ಮಹಿಳೆಯರ ಪೂರ್ಣಾವಧಿ ನೇಮಕಕ್ಕೆ ಈಗ ಅವಕಾಶ ದೊರತಿದೆ. ಭೂಸೇನೆಯ ವಾಯು ರಕ್ಷಣಾ ವಿಭಾಗ ಸಿಗ್ನಲ್ ಎಂಜಿನಿಯರಿಂಗ್ ಭೂಸೇನಾ ಸೇವಾ ಕೋರ್, ಭೂಸೇನಾ ಆರ್ಡನ್ಸ್ ಕೋರ್ ಮತ್ತು ಗುಪ್ತಚರ ಕೋರ್‌ನಲ್ಲಿ ಮಹಿಳೆಯರಿಗೆ ಈಗ ಅವಕಾಶಗಳು ತೆರೆದುಕೊಂಡಿವೆ.

ನ್ಯಾಯಾಧೀಶರು ಮತ್ತು ಅಡ್ವೋಕೇಟ್ ಜನರಲ್ ಹಾಗೂ ಭೂಸೇನಾ ಶಿಕ್ಷಣ ಕೋರ್‌ನಲ್ಲಿ ಮಹಿಳೆಯರ ಪೂರ್ಣಾವಧಿ ಸೇವೆಗೆ 2008ರಿಂದಲೇ ಅವಕಾಶ ಇತ್ತು.

ಭಾರತೀಯ ಸೇನೆಯಲ್ಲಿರುವ ಮಹಿಳಾ ಅಧಿಕಾರಿಗಳಿಗೆ ಪೂರ್ಣಾವಧಿ ಕರ್ತವ್ಯದ ಅವಕಾಶ ನೀಡುವ ಸರ್ಕಾರದ ಆದೇಶ ಪತ್ರವನ್ನು ರಕ್ಷಣಾ ಸಚಿವಾಲಯವು ಪ್ರಕಟಿಸಿದೆ. ಈ ಮೂಲಕ ಮಹಿಳೆಯರು ಭೂಸೇನೆಯಲ್ಲಿ ಮಹತ್ವದ ಹೊಣೆಗಾರಿಕೆಗೆ ಹೆಗಲು ಕೊಡಲು ಅವಕಾಶ ಸೃಷ್ಟಿಯಾಗಿದೆ. ಅಲ್ಪಾವಧಿ ಸೇವೆಗೆ ನೇಮಕವಾಗಿರುವ ಮಹಿಳೆಯರಿಗೆ ಭಾರತೀಯ ಭೂಸೇನೆಯ ಹತ್ತು ಕ್ಷೇತ್ರಗಳಲ್ಲಿ ಪೂರ್ಣಾವಧಿ ಕರ್ತವ್ಯಕ್ಕೆ ಅವಕಾಶ ಇದೆ ಎಂದು ರಕ್ಷಣಾ ಸಚಿವಾಲಯವು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದೆ.

ಆರ್ಮರ್ಡ್ ಕೋರ್, ಪದಾತಿ ದಳ, ಫಿರಂಗಿ ದಳ ಮತ್ತು ಮೆಕನೈಸ್ಡ್ ಪದಾತಿದಳದಲ್ಲಿ ಮಹಿಳೆಯರಿಗೆ ಅವಕಾಶ ಇಲ್ಲ.

1992ರಲ್ಲಿ ಭೂಸೇನೆಗೆ ಮಹಿಳೆಯರ ಸೇರ್ಪಡೆ ಆರಂಭಿಸಲಾಯಿತು. ನ್ಯಾಯಾಧೀಶರು ಮತ್ತು ಅಡ್ವೋಕೇಟ್ ಜನರಲ್ ಹಾಗೂ ಶಿಕ್ಷಣ ಕೋರ್‌ಗಳಲ್ಲಿ ಮಹಿಳೆಯರಿಗೆ 2008 ರಿಂದ ಸಮಾನ ಅವಕಾಶ ದೊರಕಿತು. ಅಲ್ಪಾವಧಿ ಕರ್ತವ್ಯದ ಮೂಲಕವೇ ಮಹಿಳೆಯರ ನೇಮಕ ಆಗುತ್ತಿತ್ತು. ಮೊದಲಿಗೆ ಇದು 5 ವರ್ಷ ಇತ್ತು. ಬಳಿಕ ಅದನ್ನು 14 ವರ್ಷಕ್ಕೆ ಏರಿಸಲಾಗಿದೆ.

**ಕಾನೂನು ಹೋರಾಟ:** ದೆಹಲಿ ಹೈಕೋರ್ಟ್ ತೀರ್ಪಿನ ಮೂಲಕ 2010ರಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭವಾಯಿತು. ಮಹಿಳೆಯರಿಗೆ ಸಮಾನ ಅವಕಾಶ ನೀಡಬೇಕು ಎಂದು ಸುಪ್ರೀಂಕೋರ್ಟ್ ಈ ತೀರ್ಪು ನೀಡಿತ್ತು. ಸೇನೆಯ ವಿವಿಧ ಸೇವೆಗಳಲ್ಲಿ ಮಹಿಳೆಯರು ಕೆಲಸ ಮಾಡಲು ಹಲವು ತೊಡಕುಗಳಿವೆ ಎಂಬ ಕೇಂದ್ರ ಸರ್ಕಾರದ ವಾದವನ್ನು ನ್ಯಾಯಾಲಯವು ತಿರಸ್ಕರಿಸಿತು.

ದೈಹಿಕವಾಗಿ ಮಹಿಳೆಯರು ದುರ್ಬಲ ಮತ್ತು ಹೆಣ್ಣು ಎಂಬ ಕಾರಣಕ್ಕಾಗಿಯೇ ಅವರು ಕುಟುಂಬದಲ್ಲಿ ಹಲವು ಹೊಣೆಗಳನ್ನು ನಿಭಾಯಿಸಬೇಕಾಗುತ್ತದೆ. ಇವು ಸೇನೆಯಲ್ಲಿ ಅವರ ಕರ್ತವ್ಯಕ್ಕೆ ಅಡ್ಡಿ ಎಂಬ ಕೇಂದ್ರದ ವಾದವನ್ನು ಕೋರ್ಟ್ ಒಪ್ಪಲಿಲ್ಲ. ಸ್ವಾತಂತ್ರ್ಯ ಬಂದು 70 ವರ್ಷಗಳ ಬಳಿಕವೂ ಆ ರೀತಿ ಯೋಚಿಸುತ್ತಿರುವುದು ಸರಿಯಲ್ಲ. ಧೋರಣೆಗಳು ಮತ್ತು ಮನಸ್ಥಿತಿಯಲ್ಲಿ ಬದಲಾವಣೆ ಆಗಬೇಕಿದೆ ಎಂದು ಸುಪ್ರಿಂಕೋರ್ಟ್ ಹೇಳಿತು.

ದೆಹಲಿ ನ್ಯಾಯಾಲಯದ ತೀರ್ಪಿನ ಮೇಲೆ ಕೇಂದ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಗೆ ಸುಪ್ರಿಂಕೋರ್ಟ್ ಈ ತೀರ್ಪು ನೀಡಿದೆ. ತೀರ್ಪಿನ ಜಾರಿಗೆ ಕೇಂದ್ರ ಸರ್ಕಾರಕ್ಕೆ ಒಂದು ತಿಂಗಳ ಕಾಲಾವಕಾಶವನ್ನು ಸುಪ್ರಿಂಕೋರ್ಟ್ ಕಳೆದ ತಿಂಗಳು ನೀಡಿತ್ತು.

ಮಹಿಳಾ ಅಧಿಕಾರಿಗಳನ್ನು ಪೂರ್ಣಾವಧಿಗೆ ನೇಮಿಸುವುದಕ್ಕಾಗಿ ಕಾಯಂ ನೇಮಕ ಆಯ್ಕೆ ಮಂಡಳಿಯು ಹಲವು ಸಿದ್ಧತೆಗಳನ್ನು ನಡೆಸಬೇಕಿದೆ. ಆಯ್ಕೆಗೆ ಅರ್ಹರಾದ ಎಲ್ಲ ಮಹಿಳಾ ಅಧಿಕಾರಿಗಳು ತಮ್ಮ ದಾಖಲೆ ಪತ್ರಗಳನ್ನು ಸಲ್ಲಿಸಿದ ಬಳಿಕ ಆಯ್ಕೆ ಮಂಡಳಿಯ ಸಭೆ ನಡೆಯಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಆಧಾರ:ಪ್ರಜಾವಾಣಿ ,ದಿನಾಂಕ:27.07.2020